ಎಂದವನ ಮಾತಿಗೆ, "ಆಯಿತು..." ಎಂದು ಚಹಾ ಕ್ಯಾನ್ಸಲ್ ಮಾಡಿದ್ದೆ.

ಐದೂವರೆಗೆ ನಾನು ಚಂಚಲಗೂಡ ಪೊಲೀಸ್ ಗೆಸ್ಟ್‌ಹೌಸ್‌ಗೆ ಹೋದಾಗ ಕೃಷ್ಣ ಮನೋಹರ ಗೆಸ್ಟ್‌ಹೌಸ್ ಆವರಣದ ಸೋಫಾದ ಮೇಲೆ ಆರಾಮವಾಗಿ ಕುಳಿತಿದ್ದ. ನಾನು ಅವನ ಮುಂದಿನ ಸೀಟಿನಲ್ಲಿ ಕುಳಿತಿದ್ದೆ. "ಜೈಲು ನೋಡ್ತೀಯಾ?..." ಎಂದು ಕೇಳಿದವನಿಗೆ, "ಇಲ್ಲ, ನೋಡಿದ್ದೀನಲ್ಲ ಮೊದ್ಲೆ. ಕೈದಿಗಳನ್ನ ನೋಡಿದ್ರೆ ಒಂಥರಾ ಸಂಕಟ ಆಗ್ತದೆ..." ಎಂದೆ. ಹಿಂದೆ ಒಂದು ಸಾರಿ ಬಂದಾಗ ಚಂಚಲಗೂಡ, ಚೆರ್ಲಪಲ್ಲಿ ಎರಡೂ ಜೈಲುಗಳನ್ನು ನೋಡಿದ್ದೆ. "ಏನಾದ್ರೂ ತಗೋತೀಯಾ..." ಕೇಳಿದ್ದ.

"ಮಧ್ಯಾಹ್ನವೇ ಐಸ್ ವೈನ್ ತಗೊಂಡೆ. ಚೆರ್ಲಪಲ್ಲಿ ನರಸಿಂಹರೆಡ್ಡಿಯೊಂದಿಗೆ... ಸದ್ಯ ಖಡಕ್ ಚಾ ಸಾಕು..." ಎಂದೆ.

"ಸಿರಿವಂತರ ಸಹವಾಸ. ಚೆರ್ಲಪಲ್ಲಿ ಜೈಲಿನ ಮುಕ್ಕಾಲು ಪಾಲು ಜಮೀನು ನರಸಿಂಹರೆಡ್ಡಿಯ ಕುಟುಂಬಕ್ಕೆ ಸೇರಿದ್ದು. ಅವರ ತಾತ ಸರ್ಕಾರ ಕೇಳಿದ ತಕ್ಷಣ ಬರೆದು ಕೊಟ್ಟರಂತೆ. ಇವೊತ್ತಿನ ದಿನ ನೂರಾರು ಕೋಟಿ ಬೆಲೆ. ಚೆರ್ಲಪಲ್ಲಿಯಲ್ಲಿ ಅವರು ಮನೆ ಕಟ್ಟಲು ಪಾಯ ತೆಗೆಯುವಾಗ ಇಪ್ಪತ್ತು ಟನ್ ಬಂಗಾರದ ಗಟ್ಟಿಗಳು ಸಿಕ್ಕಿದ್ದವಂತೆ ಆ ಕಾಲದಲ್ಲಿ. ಅವನ್ನು ಹೊರ ತೆಗೆಯುವಾಗ ಏಳೆಂಟು ಸರ್ಪಗಳನ್ನು ಸಾಯಿಸಿದರಂತೆ. ಅಂದಿನಿಂದಲೂ ಅವರ ಕುಟುಂಬಕ್ಕೆ ಉಗ್ರವಾದ ಸರ್ಪದೋಷ ಅಂಟಿಕೊಂಡಿದೆಯಂತೆ. ಪ್ರತಿ ವರ್ಷ ಕಾಳಹಸ್ತಿಯಲ್ಲಿ ಸರ್ಪ ಸಂಸ್ಕಾರ ಮಾಡ್ತಾರೆ. ಕೋಟಿ ಕೋಟಿ ಖರ್ಚು ಮಾಡ್ತಾರೆ. ಆದರೂ ಏನಾದರೂ ಒಂದು ಕುಟುಂಬ ಕಂಟಕ ಸದಾ ಕಾಡ್ತ ಇರ್ತದಂತೆ. ಜೈಲಿನ ಸಿಬ್ಬಂದಿಯಲ್ಲಿ ಸುಮಾರು ಜನ ಕಾರ್ಮಿಕರು ಅವರ ಬಂಧುಗಳಿದ್ದಾರೆ. ನರಸಿಂಹರೆಡ್ಡಿಯವರದು ಆಂಧ್ರದ ಪ್ರಭಾವಿ ಕುಟುಂಬಗಳಲ್ಲೊಂದು. ಆದರೆ ಹುಂಬತನ ಮತ್ತು ಸ್ವಪ್ರತಿಷ್ಠೆಗಳು ಅವರ ಡಿಎನ್‌ಎನಲ್ಲೆ ಬಂದುಬಿಟ್ಟಿವೆ."

ಕುತೂಹಲಕರವಾದ ಸಂಗತಿಗಳನ್ನು ಹೊರಗೆಡವಿದ್ದ.

"ರಿಯಲಿ ಗ್ರೇಟ್ ಫ್ಯಾಮಿಲಿ..." ಎಂದು ಚಹಾ ಕಪ್ಪಿಗೆ ಹಾಕಿದ್ದೆ. ಕೃಷ್ಣ ಮನೋಹರ ತಾನೂ ಚಹಾವನ್ನು ಹೀರಿ ಮುಂದುವರೆಸಿದ: "ನೀನು ಹೇಳಿದ ಪ್ರತಾಪಸಿಂಹರೆಡ್ಡಿ ಈ ನರಸಿಂಹರೆಡ್ಡಿಯ ಅಣ್ಣ ವೀರಾಂಜನೇಯರೆಡ್ಡಿಯ ಕೊನೆಯ ಮಗ. ಅವನಿಗೆ ಮನುಷ್ಯರ ರಕ್ತ ಕುಡಿಯುವ ವಿಚಿತ್ರ ಚಟವಂತೆ. ಬ್ಲಡ್ ಬ್ಯಾಂಕುಗಳಿಂದ ರಕ್ತ ತರಿಸಿಕೊಂಡು ಊಟದ ಜೊತೆ ನಂಚಿಕೊಂಡು ಕುಡಿಯುತ್ತಿದ್ದನಂತೆ. ಮತ್ತೆ ವಿಸ್ಕಿ ಜೊತೆ ಕೂಡ ರಕ್ತ ಬೆರೆಸಿಕೊಳ್ಳುತ್ತಿದ್ದನಂತೆ. ಮುಂಬಯಿಗೆ ಎಂಜಿನಿಯರಿಂಗ್ ಓದಲು ಹೋದವನು ಮುಂಬಯಿಯ ಅಂಡರ್ ವರ್ಲ್ಡ್ ಕನೆಕ್ಷನ್ ಸಿಕ್ಕಿ ದಾವೂದ್ ಗ್ಯಾಂಗಿನಲ್ಲಿ ಏಳು ವರ್ಷ ಇದ್ದನಂತೆ. ಆ ದಾವೂದ್ ಗ್ಯಾಂಗಿನಲ್ಲಿ ಹೀಗೆ ಮನುಷ್ಯರ ರಕ್ತ ಕುಡಿಯೋರು ಇನ್ನೂ ಮೂರ್ನಾಲ್ಕು ಜನ ಇದ್ದಾರಂತೆ. ಈ ಪ್ರತಾಪಸಿಂಹರೆಡ್ಡಿ ಎರಡು ಮೂರು ಬಾರಿ ಮುಂಬಯಿ ಪೊಲೀಸ್ ಎನ್‌ಕೌಂಟರ್‌ನಿಂದ ತಪ್ಪಿಸಿಕೊಂಡಿದ್ದಾನೆ. ಎರಡು ತಿಂಗಳ ಹಿಂದೆ ರಾಜಮಹೇಂದ್ರಿಯ ಹುಡುಗಿಯೊಬ್ಬಳನ್ನು ಪ್ರೀತಿಸುವ ನಾಟಕವಾಡಿ ನಂಬಿಸಿ ಮುಂಬಯಿಗೆ ಕರೆದುಕೊಂಡು ಹೋಗಿ ಸಾಯಿಸಿ ರಕ್ತ ಕುಡಿದಿದ್ದಾನೆ. ಮುಂಬಯಿಯ ಲೋಖಂಡ್ವಾಲದ ಕ್ಲಬ್ ಒಂದರಲ್ಲಿ ಸಿನಿಮಾದ ಸಹನಟಿಯೊಬ್ಬಳೊಂದಿಗೆ ಪೊಲೀಸರಿಗೆ ಸಿಕ್ಕಿ ಬಿದ್ದಾಗ ಅವನು ಮಾಡಿರುವ ಕೃತ್ಯಗಳನ್ನು ಒಪ್ಪಿಕೊಂಡಿದ್ದಾನೆ. ಎರಡು ಮೂರು ದಿನಗಳಲ್ಲಿ ಆ ಸಹನಟಿಯ ರಕ್ತ ಕುಡಿಯಲು ಯೋಜನೆ ರೂಪಿಸಿದ್ದನಂತೆ. ಜೂರಿಸ್ಡಿಕ್ಷನ್ ರಾಜಮಹೇಂದ್ರಿಗೆ ಬರುವುದರಿಂದ ನಮ್ಮ ಪೊಲೀಸರೇ ಹೋಗಿ ಅರೆಸ್ಟ್ ಮಾಡಿಕೊಂಡು ಬಂದಿದ್ದಾರೆ. ಜೈಲಿನಲ್ಲಿ ವಿಪರೀತ ರಂಪಾಟ ಮಾಡುತ್ತಿರುವ